# ಗಿನ್ನಿಸ್ ಅಜ್ಜ!




ಹಲವರಿಗೆ 60 ವರ್ಷವಾದರೆ ಸಾಕು, ಏನು ಮಾಡಲೂ ಮನಸ್ಸಿರುವುದಿಲ್ಲ. ಜೀವನವೇ ಮುಗಿದು ಹೋಗಿದೆಯೆಂಬ ನಿರುತ್ಸಾಹ ಬೇಸರ. ಆದರೆ ವಿದ್ಯೆ ಕಲಿಯಲು ವಯಸ್ಸು ಖಂಡಿತಾ ಅಡ್ಡಿಯಾಗದು ಎಂದು ಹೇಳುತ್ತಾರೆ 70 ರ ಹರೆಯದ ಲೂಸಿಯಾನೊ ಬೈಟ್ಟಿ.

ಇಟಲಿ ದೇಶದ ವೆಲ್ಲೆಟ್ರಿ ಎಂಬ ಪಟ್ಟಣದ ಶಾಲೆಯೊಂದರಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸ ನಿರ್ವಹಿಸಿ ನಿವೃತ್ತ ಜೀವನ ನಡೆಸುತ್ತಿರುವ ಈ ಅಜ್ಜ, ಓದಿ ಗಳಿಸಿರುವ ಪದವಿ(ಡಿಗ್ರಿ)ಗಳ ಸಂಖ್ಯೆಯನ್ನು ಕೇಳಿದರೆ ನಿಮಗೆ ಅಚ್ಚರಿಯಾಗುವುದು ಖಂಡಿತ. ಇವರು ಪ್ರಖ್ಯಾತ ವಿಶ್ವವಿದ್ಯಾನಿಲಯಗಳಿಂದ ಈಗಾಗಲೇ 15 ಪದವಿಗಳನ್ನು ಪಡೆದು ಗಿನ್ನಿಸ್ ವಿಶ್ವ ದಾಖಲೆಯ ಹಿರಿಮೆಗೆ ಪಾತ್ರರಾಗಿದ್ದಾರೆ. ಅದೂ ಅಲ್ಲದೆ 16ನೇ ಪದವಿಯನ್ನೂ ಪಡೆಯಲು ಅಣಿಯಾಗುತ್ತಿದ್ದಾರೆ!

70 ವರ್ಷ ವಯಸ್ಸಿನ ಇತರ ವಯೋವೃದ್ಧರಂತೆ ಹಗಲು ವೇಳೆಯಲ್ಲಿ ಮನೆ ಹಾಗೂ ತೋಟದ ಕೆಲಸ ಮಾಡುವ ಲೂಸಿಯಾನೊ ಬೈಟ್ಟಿಯವರು ರಾತ್ರಿ ವೇಳೆಯಲ್ಲಿ ಪಕ್ಕಾ ವಿದ್ಯಾರ್ಥಿ. ಪ್ರತೀ ದಿನ ಬೆಳಗಿನ ಜಾವ 3 ಗಂಟೆಗೆ ಇವರ ಓದುವಿಕೆ ಶುರುವಾಗುತ್ತದೆಯಂತೆ. ಬಹಳಷ್ಟು ಜನರು ಇನ್ನೂ ಗಾಢ ನಿದ್ದೆಯಲ್ಲೇ ಇರುವಾಗ ಬೈಟ್ಟಿ ಮಾತ್ರ ತಮ್ಮ ಟೇಬಲ್ ಲ್ಯಾಂಪ್ ಬೆಳಕಿನಲ್ಲಿ ಪಠ್ಯಪುಸ್ತಕದ ಅಭ್ಯಾಸದಲ್ಲಿ ತೊಡಗಿರುತ್ತಾರೆ.

'ಓದುವಿಕೆಯು ನನ್ನ ಮೆದುಳನ್ನು ಸದಾ ಚುರುಕಾಗಿಡುತ್ತದೆ ಮತ್ತು ಗಳಿಸಿದ ಪ್ರತಿಯೊಂದು ಪದವಿಯು ನನ್ನ ಸುತ್ತಲಿರುವ ಪ್ರಪಂಚದ ಜ್ಞಾನದ ಹರಿವನ್ನು ಹೆಚ್ಚಿಸುತ್ತದೆ ಇದರೊಂದಿಗೆ ಗಿನ್ನಿಸ್ ದಾಖಲೆಗೆ ನನ್ನ ಹೆಸರು ಸೇರ್ಪಡೆಯಾಗಿರುವುದು ತುಂಬಾ ಸಂತಸ ನೀಡುತ್ತದೆ' ಎಂದು ಲೂಸಿಯಾನೊ ಬೈಟ್ಟಿ ಹೇಳುತ್ತಾರೆ.

ಇವರ ಪದವಿ ಗಳಿಕೆಗೆ, ಹೆಸರಾಂತ ಫ್ರೆಂಚ್ ಪ್ರಬಂಧಕಾರ ಲೂಯಿಸ್ ಫ್ರಾಂಕೊಯಿಸ್ ಸ್ಫೂರ್ತಿಯಂತೆ. ಲೂಯಿಸ್ ಫ್ರಾಂಕೊಯಿಸ್‌ರನ್ನು ತಿಳುವಳಿಕೆ ಹಾಗೂ ಸುಸಂಸ್ಕೃತ ಮನುಷ್ಯ ಎಂದು ಬಣ್ಣಿಸುವ ಬೈಟ್ಟಿ, ಅವರ ಭಾವಚಿತ್ರವನ್ನು ತಮ್ಮ ಡಿಗ್ರಿ ಸರ್ಟಿಫಿಕೆಟ್‌ಗಳೊಂದಿಗೆ ಓದುವ ಕೋಣೆಯಲ್ಲಿ ತೂಗು ಹಾಕಿದ್ದಾರೆ.

ಬೈಟ್ಟಿಯವರು ಎಂಟು ಪದವಿಗಳನ್ನು ಪಡೆದುಕೊಂಡ ಮೇಲೆ ಮೊಟ್ಟ ಮೊದಲ ಬಾರಿ ಗಿನ್ನಿಸ್ ಪುಸ್ತಕದಲ್ಲಿ ದಾಖಲಾಗಿದ್ದು 2002 ರಲ್ಲಿ. ನಂತರ ಸೋಶಿಯಾಲಜಿ, ದೈಹಿಕ ಶಿಕ್ಷಣ, ಸಾಹಿತ್ಯ, ರಾಜ್ಯಶಾಸ್ತ್ರ, ಫಿಲಾಸಫಿ, ಮೋಟಾರ್ ಸ್ಕಿಲ್ಸ್ ಮುಂತಾದ ವಿಷಯಗಳಲ್ಲಿ ಬ್ಯಾಚುಲರ್ ಹಾಗೂ ಮಾಸ್ಟರ್ ಪದವಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

■ ವಿದ್ಯಾ ವಿ. ಹಾಲಭಾವಿ

